# ದರೋಡೆಗೆ ಪ್ರಯತ್ನಸಿದ ಆರೋಪಿತರ ಬಂಧನ

## ಪ್ರತಿಕಾ ಪ್ರಕಟಣೆ

ಇಂದು ದಿನಾಂಕ 15/07/2021 ರಂದು ವಿಶೇಷ ರಾತ್ರಿ ಗಸ್ತು ಕರ್ತವ್ಯದಲ್ಲಿ ಇದ್ದಾಗ ಕಲಬುರಗಿ-ಆಳಂದ ರಾಷ್ಟ್ರಿಯ ಹೆದ್ದಾರಿಯ ಕೇರಿಬೋಸಗಾ ಕ್ರಾಸ ಸಮೀಪದ ರೋಡ ಹಂಪ್ಸ ಹತ್ತಿರ ಯಾರೋ 4-5 ಜನರು ತಮ್ಮ ಕೈಯಲ್ಲಿ ಮಾರಕಾಸ್ತ್ರಗಳನ್ನು ಹಿಡಿದು ಮುಖಕ್ಕೆ ಬಟ್ಟೆ ಕಟ್ಟಿಕೊಂಡು ನಿಂತು ರೋಡಿಗೆ ಹೋಗಿ ಬರುವ ವಾಹನ ಸವಾರರಿಗೆ ತಡೆದು ದರೋಡೆ ಮಾಡಲು ಹೊಂಚುಹಾಕುತ್ತಾ ನಿಂತಿರುತ್ತಾರೆ ಅಂತಾ ದಿನಾಂಕ 16/07/2021 ರಂದು ಬೆಳಿಗ್ಗೆ ಸಿಬ್ಬಂದಿಯೊಂದಿಗೆ ದಾಳಿಮಾಡಲು ಮಾನ್ಯ ಶ್ರೀ ಡಾ: ವಾಯ್ ಎಸ್ . ರವಿಕುಮಾರ ಐಪಿಎಸ್ ಪೊಲೀಸ ಆಯುಕ್ತರು ಕಲಬುರಗಿ ನಗರ , ಶ್ರೀ ಅಡ್ಡುರು ಶ್ರೀನಿವಾಸಲು ಐಪಿಎಸ್ ಡಿ.ಸಿ.ಪಿ (ಕಾ&ಸು) ಕಲಬುರಗಿ ನಗರ, ಶ್ರೀ ಶ್ರೀಕಾಂತ ಕಟ್ಟಿಮನಿ ಡಿ.ಸಿ.ಪಿ ( ಅ.ವಿ & ಸಂಚಾರ) ಮತ್ತು ಶ್ರೀ ಜೆ.ಎಚ್ ಇನಮಾದಾರ ಎ.ಸಿ.ಪಿ ಸಿ ಉಪವಿಭಾಗ ರವರ ಮಾರ್ಗದರ್ಶನದಲ್ಲಿ ಭಾಸು ಚವ್ಹಾಣ ಪಿಐ ಗ್ರಾಮೀಣ ಠಾಣೆ ರವರ ನೇತೃತ್ವದಲ್ಲಿ ಗ್ರಾಮೀಣ ಠಾಣೆಯ ಕವಿತಾ ಚವ್ಹಾಣ ಪಿಎಸ್ಐ (ಕಾ&ಸು) , ಅಂಬಾಜಿ ಪಿಸಿ 954, ಮಲ್ಲಿಕಾರ್ಜುನ ಪಿಸಿ 825 , ಪ್ರಕಾಶ ಪಿಸಿ 66, ನಾಗಂದ್ರ ಪಿಸಿ 86 , ಅನೀಲ ಪಿಸಿ 250, ಶಿರಾಜೊದ್ದಿನ್ ಹೆಚ್‌ಸಿ 131, ಪ್ರಶಾಂತ ಪಿಸಿ 892, ಚೆನ್ನಬಸಯ್ಯಾ ಪಿಸಿ 1262 ರವರನ್ನು ಕರೆದುಕೊಂಡು ದರೋಡೆ ಮಾಡಲು ಯತ್ನಿಸಿದ ಆರೋಪಿತರಾದ 1) ಆಮೀರ ಹಫಿಸ್ ತಂದೆ ಲಾಲ ಅಹ್ಮೇದ ಶೇಖ ವಯಾ: 20 ವರ್ಷ 2) ಸಾಗರ ತಂದೆ ಸುರೇಶ ರತ್ನಾಕರ ವಯಾ: 21 ವರ್ಷ 3) ಅವಿನಾಶತಂದೆ ಮನೋಹರ ಹೊಸಮನಿ ವಯಾ: 20 ವರ್ಷ 4) ಸೋಹೆಲ್ ತಂದೆ ನಿಜಾಮುದ್ದಿನ್ ಶಾಬದಿ ವಯಾ: 22 ವರ್ಷ ಸಾ: ಎಲ್ಲರೂ ಕಲಬರಗಿ ಇವರನ್ನು ಇಂದು ದಿನಾಂಕ 16/07/2021 ರಂದು ಬೆಳಿಗ್ಗೆ ಕೇರಿ ಭೋಸಗಾ ಕ್ರಾಸ ಹತ್ತಿರ ಹಿಡಿದು ದಸ್ತಗಿರಿ ಮಾಡಿದ್ದು ಸದರಿ ಆಪಾದಿತರನ್ನು ವಿಚಾರಣೆ ಕಾಲಕ್ಕೆ ತಿಳಿಸಿದೆನೆಂದರೆ ತಾವುಗಳು ರೋಡಿಗೆ ಹೋಗಿ ಬರುವ ಜನರಿಗೆ ಹೆದರಿಸಿ ಅವರಿಂದ ಬಂಗಾರ, ಬೆಳ್ಳಿ ಮತ್ತು .ಹಣವನ್ನು ಅಂಜಿಸಿ ಕಸಿದುಕೊಳ್ಳುತ್ತಿದ್ದೇವು ಅಂತಾ ತಪ್ಪುಒಪ್ಪಿಕೊಂಡಿದ್ದು ಇರುತ್ತದೆ.

ಸದರಿ ಆಪಾದಿತರನ್ನು ದಿನಾಂಕ 16/07/2021 ರಂದು ದಸ್ತಗಿರಿ ಮಾಡಿ ದಸ್ತಗಿರಿ ಕ್ರಮ ಕೈ ಕೊಂಡಿದ್ದು ಮತ್ತು ಆಪಾದಿತರು ಕೃತ್ಯಕ್ಕೆ ಉಪಯೋಗಿಸಿದ ಮಾರಕಾಸ್ತ್ರಗಳನ್ನು ಜಪ್ತಿ ಪಡಿಸಿಕೊಂಡಿದ್ದು ಇರುತ್ತದೆ.

ಈ ಮೇಲಿನ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಯವರ ಕಾರ್ಯಕ್ಕೆ ಮಾನ್ಯ ಪೊಲೀಸ ಆಯುಕ್ತರು ಕಲಬುರಗಿ ನಗರ ರವರು ಮೆಚ್ಚುಗೆ ವ್ಯಕ್ತ ಪಡಿಸಿರುತ್ತಾರೆ.

Scanned with CamScanner